ಬಿ.ಬಿ.ಎಂ.ಪಿ. ಅರಣ್ಯ ವಿಭಾಗದಲ್ಲಿ ನಡೆದಿರುವ ಅಕ್ರಮಗಳು

38 (73) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) 200–10 ಮತ್ತು 2010–11ನೇ ಸಾಲಿನಲ್ಲಿ ಮಹದೇವಪುರ ವಲಯವನ್ನೊಳಗೊಂಡಂತೆ ಬಿಬಿಎಂಪಿ ಅರಣ್ಯ ವಿಭಾಗದಲ್ಲಿ ಬರು ವಿವಿಧ ವಲಯಗಳಲ್ಲಿ ರಸ್ತೆ ಬದಿಯಲ್ಲಿ ಸಸಿ ನೆಡುವಿಕೆ ಯೋಜನೆಯ ಅನುಷ್ಠಾನಕ್ಕೆ ಭಾರೀ ಪ್ರಮಾಣದಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ಬಿಬಿಎಂಪಿಯ ಅಧಿಕಾರಿಗಳು ಆಯುಕ್ತರಿಗೆ ವರದಿ ಸಲ್ಲಿಸಿರುವುದು ನಿಜವಲ್ಲವೇ; (ಹಾಗಿದ್ದಲ್ಲಿ, ಈ ವರದಿಯ ಪೂರ್ಣ ವಿವರಗಳೇನು ಇಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅಧಿಕಾರಿಗಳ ಹೆಸರಿನೊಂದಿಗೆ ವಿವರ ನೀಡುವುದು);

ಆ) ಈ ಯೋಜನೆಯ ಅನುಷ್ಠಾನದಲ್ಲಿ ಎಷ್ಟು ಮೊತ್ತದ ಹಣ ಯಾವ ರೀತಿ ದುರುಪಯೋಗವಾಗಿದೆ;

ಇ) ಈ ಅಕ್ರಮದಲ್ಲಿ ಭಾಗಿಯಾಗಿದ್ದ ಅಧಿಕಾರಿಗಳ ಹೆಸರು ವಿವರಗಳೇನು; ಈ ಪೈಕಿ ಯಾವ ಯಾವ ಅಧಿಕಾರಿಗಳ ವಿರುದ್ಧ ಯಾವ ರೀತಿಯ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲಾಗಿದೆ;

ಈ) ಈ ಪೈಕಿ ಎಷ್ಟು ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆ ಮತ್ತು ಎಷ್ಟು ಜನರನ್ನು ಬಿಬಿಎಂಪಿ ಯಿಂದ ವಾಪಸ್ಸು ಕಳುಹಿಸಲಾಗಿದೆ; ಇವರಲ್ಲಿ ಎಷ್ಟು ಅಧಿಕಾರಿಗಳು ಈಗ ಬೆಂಗಳೂರು ಅಭಿವೃದ್ಧಿ ಪಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ;

ಉ) ಈ ಪೈಕಿ ಎಷ್ಟು ಅಧಿಕಾರಿಗಳ ಮೇಲೆ ಇಲಾಖಾ ವಿಚಾರಣೆಗಳು, ಸಾರ್ವಜನಿಕ ದೂರುಗಳು, ಭ್ರಷ್ಟಚಾರದ ದೂರುಗಳು ಇವೆ;

ಊ) ಇಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ? (ಅಂತಹ ಅಧಿಕಾರಿಗಳ ಹೆಸರು ವಿವರಗಳನ್ನು ಒದಗಿಸುವುದು);

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು):

ಅ) 2009–10 ಮತ್ತು 2010–11ನೇ ಸಾಲಿನಲ್ಲಿ ಮಹದೇವಪುರ ವಲಯಕ್ಕೆ ಸಂಬಂಧಿಸಿದಂತೆ ಸಸಿ ನೆಡುವಿಕೆ ಯೋಜನೆ ಅನುಷ್ಠಾನದಲ್ಲಿ ಕಂಡುಬಂದಿರುವ ಲೋಪದೋಷಗಳ ಬಗ್ಗೆ ಮುಖ್ಯ ಅಭಿಯಂತರರು (ಪಿ.ಪಿ.ಇ.ಡಿ) ಹಾಗೂ ಅಧೀಕ್ಷಕ ಅಭಿಯಂತರರು (ಟಿ.ವಿ.ಸಿ.ಸಿ.)ರವರು ತಪಾಸಣೆ ಮಾಡಿ ವರದಿ ಸಲ್ಲಿಸಿರುತ್ತಾರೆ. ತಪಾಸಣಾ ವರದಿಯನ್ನು ಅನುಬಂಧದಲ್ಲಿ ನೀಡಿದೆ. ಇಲ್ಲಿ ಕೆಲಸ ನಿರ್ವಹಿಸುತ್ತಿದ್ದ ವಲಯ ಅರಣ್ಯ ಅಧಿಕಾರಿಯ ಹೆಸರು ಶ್ರೀ ಹೆಚ್.ಕೆ.ಮರಿಸ್ವಾಮಿ.

ಆ) ಮುಖ್ಯ ಅಭಿಯಂತರರು (ಪಿ.ಪಿ.ಇ.ಡಿ) ಹಾಗೂ ಅಧೀಕ್ಷಕ ಅಭಿಯಂತರರು (ಟಿ.ವಿ.ಸಿ.ಸಿ) ರವರ ತಪಾಸಣೆ ವರದಿಯಂತೆ ಒಂದು ಸಸಿಗೆ ರೂ.380/-ರಂತೆ 2100 ಸಸಿಗಳನ್ನು 36 ಸ್ಥಳಗಳಲ್ಲಿ ನೆಟ್ಟಿರುವುದಾಗಿ ವಲಯ ಅರಣ್ಯಾಧಿಕಾರಿ ಮಹದೇವಪುರ ವಲಯ ಇವರು ಸಲ್ಲಿಸಿರುವ ವರದಿಯಲ್ಲಿರುವಂತೆ ಅಷ್ಟೂ ಸಸಿಗಳನ್ನು ನೆಟ್ಟಿರುವುದು ಕಂಡುಬಂದಿರುವುದಿಲ್ಲ. ಅಲ್ಲದೆ ಸಸಿಗಳನ್ನು ನಡುವಲ್ಲಿ ಸಿದ್ದಪಡಿಸಿರುವ ಡಾಟಾರೇಟ್‌ಗಳು ಸಾಮಾನ್ಯವಾಗಿ ಒಂದು ಸಸಿ ನೆಡಲು ಅತಿ ಹೆಚ್ಚಿನದೆಂದು ಕಂಡುಬಂದಿರುತ್ತದೆ.

ಇ ಮತ್ತು ಈ) ಈ ಪ್ರಕರಣದಲ್ಲಿ ಶ್ರೀ ಹೆಚ್.ಕೆ.ಮರಿಸ್ವಾಮಿ, ವಲಯ ಅರಣ್ಯಾಧಿಕಾರಿ, ಮಹದೇವಪುರ ವಲಯ ಇವರನ್ನು ಇಲಾಖಾ ವಿಚಾರಣೆ ಬಾಕಿ ಇಟ್ಟು, ಸೇವೆಯಿಂದ ಅಮಾನತ್ತು ಗೊಳಿಸಲಾಗಿತ್ತು. ಸದರಿಯವರು ಅಮಾನತ್ತಿನ ಆದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:661/2011 ಅನ್ನು ಸಲ್ಲಿಸಿದ್ದರು. ಕೆ.ಎ.ಟಿ.ಯು ದಿನಾಂಕ 22.02-2011ರಲ್ಲಿ ನೀಡಿದ ಆದೇಶದಲ್ಲಿ 3 ತಿಂಗಳ ಅವಧಿಯವರೆಗೆ ತಡೆಯಾಜ್ಞೆಯನ್ನು ನೀಡಿದ್ದರಿಂದ ಕೆ.ಎ.ಟಿ.ಯ ಆದೇಶದಂತೆ ಸದರಿಯವರನ್ನು ದಿನಾಂಕ 05-03-2011 ರಂತೆ ಕರ್ತವ್ಯದ ಮೇಲೆ ತೆಗೆದುಕೊಂಡು ವಲಯ ಅರಣ್ಯಾಧಿಕಾರಿ(ದಾಸರಹಳ್ಳಿ) ವಲಯದಲ್ಲಿ ಕಾರ್ಯನಿರ್ವಹಿಸಲು ವರ್ಗಾಯಿಸಲಾಗಿದೆ. ಸದರಿ ತಡೆಯಾಜ್ಞೆ ಆದೇಶವನ್ನು ತೆರವುಗೊಳಿಸಲು ಕಾನೂನಿನ ಅನ್ವಯ ಕ್ರಮ ವಹಿಸಲಾಗುತ್ತದೆ.

ಉ ಮತ್ತು ಊ) ಸಾರ್ವಜನಿಕ ದೂರುಗಳನ್ವಯ ತಾಂತ್ರಿಕ ವಿಚಕ್ಷಣಾ ಕೋಶದ (ಟಿ.ವಿ.ಸಿ.ಸಿ) ತನಿಖಾ ವರದಿಯಂತೆ ಶ್ರೀ ಹೆಚ್.ಕೆ.ಮರಿಸ್ವಾಮಿ, ವಲಯ ಅರಣ್ಯಾಧಿಕಾರಿ ಇವರ ವಿರುದ್ಧ ದೂರುಗಳಿದ್ದು, ಸದರಿಯವರನ್ನು ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ಅಮಾನತ್ತುಗೊಳಿಸಲಾಗಿತ್ತು. ಸದರಿ ಆದೇಶಕ್ಕೆ ಕೆ.ಎ.ಟಿ.ಯು ತಡೆಯಾಜ್ಞೆ ನೀಡಿರುತ್ತದೆ. ಈ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 73ಕ್ಕೆ ಅನುಬಂಧ

ವಿಶೇಷ ಆಯುಕ್ತರು (ಯೋಜನೆ), ಬಿ.ಬಿ.ಎಂ.ಪಿ. ರವರ ಆದೇಶದಂತೆ ಮಹದೇವಪುರ ವಲಯಕ್ಕೆ ಸಂಬಂಧಿಸಿದಂತೆ 2010-11ನೇ ಸಾಲಿನಲ್ಲಿ ಪಾಲಿಕೆಯ ಅರಣ್ಯ ವಿಭಾಗದಿಂದ ಸಸಿಗಳನ್ನು ನೆಟ್ಟಿರುವ ಬಗ್ಗೆ ದಿನಾಂಕ 01-02-2011, 02-02-2011 ಮತ್ತು 03-02-2011 ರಂದು ಸಂಬಂಧಪಟ್ಟ

ವಲಯ ಅರಣ್ಯಾಧಿಕಾರಿ (ಮಹದೇವಪುರ ವಲಯ) ರವರೊಂದಿಗೆ ತಾಂತ್ರಿಕ ವಿಚಕ್ಷಣಾ ಕೋಶವು ಜಂಟಿ ತಪಾಸಣೆ ನಡೆಸಿರುತ್ತದೆ.

ಮಹದೇವಪುರ ವಲಯದ ವಲಯ ಅರಣ್ಯಾಧಿಕಾರಿಯಾಗಿದ್ದ ಶ್ರೀ ಎಂ.ಕೆ. ಮರಿಸ್ವಾಮಿ ರವರು ಮಹದೇವಪುರ ವಲಯಕ್ಕೆ ಸಂಬಂಧಿಸಿದಂತೆ 2010–11ನೇ ಸಾಲಿನಲ್ಲಿ ಮಹದೇವಪುರ ವಲಯದ ಬಡಾವಣೆ/ರಸ್ತೆ/ಹಳ್ಳಿಗಳಲ್ಲಿ ಒಟ್ಟು 21,100 ಸಸಿಗಳನ್ನು 36 ಸ್ಥಳಗಳಲ್ಲಿ ನೆಟ್ಟಿರುವುದಾಗಿ ವರದಿ ನೀಡಿರುತ್ತಾತೆ. ತತ್ಸಂಬಂದ 17 ಕಡತಗಳನ್ನು ಸಲ್ಲಿಸಿದ್ದು, ಇದರನ್ವಯ ಪರಿವೀಕ್ಷಣೆಯನ್ನು ಕೈಗೊಂಡು ಈ ಕೆಳಕಂಡ ನ್ಯೂನತೆಗಳನ್ನು ಗುರುತಿಸಲಾಗಿದೆ.

(1) ಪರಿವೀಕ್ಷಣಾ ಸಮಯದಲ್ಲಿ ವಲಯ ಅರಣ್ಯಾಧಿಕಾರಿಯವರು ತೋರಿಸಿರುವ ಸಸಿಗಳಲ್ಲಿ ಹಲುವ 2009–10 ಸಾಲಿನವೂ ಅಥವಾ 2010–11ರ ಸಾಲಿನದೆಂದು ಗುರುತಿಸಲು ಯಾವುದೇ ಮಾನದಂಡ ಇರುವುದಿಲ್ಲ.

(2) ಸಸಿಗಳನ್ನು ನೆಟ್ಟ ಮೇಲೆ ಅವುಗಳನ್ನು ಯಾವುದೇ Register ನಲ್ಲಿ ದಾಖಲಿಸಿರುವುದಾಗಲಿ Stock Register ಅಥವಾ Log Book maintain ಮಾಡದೆ ಇರುವುದು ಕಂಡು ಬಂದಿರುತ್ತದೆ.

(3) ಸಸಿಗಳನ್ನು ನೆಡಲು ಬಡಾವಣೆಗಳನ್ನು ಹಾಗೂ ಸ್ಥಳಗಳನ್ನು ಗುರುತಿಸುವಲ್ಲಿ ಲೋಪಗಳುಂಟಾಗಿದ್ದು. ಇದಕ್ಕೆ ಪೂರಕವಾಗಿ ಅಂದಾಜು ಪಟ್ಟಿಗಳಲ್ಲಿ ನಕ್ಷೆ/ಸ್ಥಳಗಳ ವಿವರಣೆಗಳನ್ನು ತಯಾರಿಸಿಕೊಂಡಿರುವುದಿಲ್ಲ.

(4) ಪರಿವೀಕ್ಷಣಾ ಸಮಯದಲ್ಲಿ ವಲಯ ಅರಣ್ಯಾಧಿಕಾರಿಯವರು ತೋರಿಸಿರುವ ಸಸಿಗಳು 30 ಸೆಂ.ಮೀ.ರಿಂದ 100 ಸೆಂ.ಮೀ. ವರೆಗೆ ಎತ್ತರ ಇದ್ದು, ಇವು ಯಾವ ಸಾಲಿನ ಆರ್ಥಿಕ ವರ್ಷದಲ್ಲಿ ನೆಟ್ಟಿರುವುದೆಂದು ತಿಳಿದು ಬರುವುದಿಲ್ಲ.

(5) Data Rate ಅನ್ವಯ ಒಂದು ಸಿಸಿಗೆ ರೂ.380.00 ರಂತೆ ಅನುಮೋದಿಸಿದ್ದು, ಹಲವು ಅಂದಾಜು ಪಟ್ಟಿಗಳನ್ನು ಪರಿಶೀಲಿಸಲಾಗಿ ಒಂದು ಸಸಿಗೆ ರೂ.450.00 ರಷ್ಟು ಪರಿಗಣಿಸಿರುವುದು ಕಂಡುಬಂದಿರುತ್ತದೆ.

(6) ಅಂದಾಜು ಪಟ್ಟಿಯನ್ನು ಸಿದ್ದಪಡಿಸುವಾಗ ಬಡಾವಣೆಗಳು, ಹಳ್ಳಿಗಳು, ವಾರ್ಡ್‌ಗಳು ಇವುಗಳನ್ನು ನಮೂದಿಸಿದ್ದು, ಬಡಾವಣೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟವಾದ ಬಡಾವಣೆ ನಕ್ಷೆಯಾಗಲಿ, ಗಡಿ ರೇಖೆ ನಿಗಧಿ ಪಡಿಸಿರುವುದಿಲ್ಲ.

(7) ಅನೇಕ ಸ್ಥಳಗಳಲ್ಲಿ ಒಂದು ಬಡಾವಣೆಯಲ್ಲಿ ನಮೂದಿಸಿರುವ ಸಸಿಗಳನ್ನು ಪರಿವೀಕ್ಷಣಾ ಸಮಯದಲ್ಲಿ ಇನ್ನೊಂದು ಬಡಾವಣೆಯಲ್ಲಿ ಹಾಕಿರುವುದಾಗಿ ತಿಳಿಸಿ ತೋರಿಸಲಾಗಿದೆ.